ಪತ್ತೆಹಚ್ಚಲು ರಾಜ್ಯಮಟ್ಟದಲ್ಲಿ ಒಂದು ದರೋಡೆತಪಾಸಣೆ ತಂಡವನ್ನು ನೇಮಿಸಿರುವ ಪ್ರಸ್ತಾವನೆಯೂ ಸಹ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯಕ್ಕೆ ಸೀಮೆಎಣ್ಣೆ ಮತ್ತು ಡೀಸಲ್ ಅವಶ್ಯಕತೆ.

೫೨೫. ಶ್ರೀ ಜಿ. ರಾಜಂಗೌಡ (ಹನೂರು).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಕ್ಕೆ ತಿಂಗಳೊಂದಕ್ಕೆ ಬೇಕಾಗಿರುವ ಸೀಮೆಎಣ್ಣೆ ಹಾಗೂ ಡೀಸಲ್‌ನ ಪ್ರಮಾಣ ಎಷ್ಟು?

ಆ) ಇದನ್ನು ಯಾವ ಯಾವ ಸಂಸ್ಥೆ ಎಷ್ಟೆಷ್ಟು ಪೂರೈಸುತ್ತಿವೆ?

ಇ) ಇದರಿಂದ ಸರ್ಕಾರಕ್ಕೆ ಆಗುವ ಲಾಭ ನಷ್ಟವೆಷ್ಟು?

ಶ್ರೀ ಬಸವರಾಜ ಪಾಟೀಲ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು).—

ಅ) ನಮ್ಮ ರಾಜ್ಯಕ್ಕೆ ೪೬,೫೦೦ ಕೆ.ಎಲ್. ಸೀಮೆಎಣ್ಣೆ ಹಾಗೂ ೮೭,೦೦೦ ಕೆ.ಎಲ್. ಡೀಸಲ್ ತಿಂಗಳೊಂದಕ್ಕೆ ಬೇಕಾಗಿರುತ್ತದೆ.

ಆ) ಕೇಂದ್ರ ಸರ್ಕಾರವು ಹಾಲಿ ಳಳ.೦೫೦ ಕೆ.ಎಲ್. ಸೀಮೆಎಣ್ಣೆಯನ್ನು ಹಾಗೂ ಡೀಸಲ್‌ನ ಪೂರ್ಣ ಬೇಡಿಕೆಯನ್ನು ಅವರ ಸಾಮ್ಯಕ್ಕೆ ಒಳಪಟ್ಟು ಐ.ಒ.ಸಿ., ಬಿ.ಪಿ.ಸಿ., ಹೆಚ್.ಪಿ.ಸಿ., ಮತ್ತು ಐ.ಬಿ.ಪಿ. ಆಯಿಲ್ ಕಂಪೆನಿಗಳು ಶೇಕಡಾವಾರು ಕ್ರಮವಾಗಿ ೬೧, ೧೩, ೨೪ ರಂತೆ ೨ರ ಪ್ರಮಾಣದಲ್ಲಿ ಪೂರೈಸುತ್ತಿವೆ.

ಇ) ಸೀಮೆಎಣ್ಣೆ ಮತ್ತು ಡೀಸಲ್ ವ್ಯವಹಾರಗಳು ನೇರವಾಗಿ ಕೇಂದ್ರದ ಸಾಮ್ಯಕ್ಕೆ ಒಳಪಟ್ಟಿರುವುದರಿಂದ ರಾಜ್ಯ ಸರ್ಕಾರಕ್ಕೆ ಯಾವ ರೀತಿಯ ಲಾಭ ಅಥವಾ ನಷ್ಟ ಉಂಟಾಗುವ ಸಂಭವವಿಲ್ಲ.

ಮಕ್ಕಳ ಮರಣ ತಡೆಯುವುದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳು.

೫೩೯. ಶ್ರೀ ಜಿ. ರಾಜಂ ಗೌಡ, (ಹನೂರು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ಸಾವಿರ ಮಕ್ಕಳಿಗೆ ಎಷ್ಟು ಮಕ್ಕಳು ಮರಣ ಹೊಂದುತ್ತಿದ್ದಾರೆ ?

ಆ) ಇದನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು) —

ಅ) ೭೦.

ಆ) ರಾಜ್ಯದಲ್ಲಿ ಮಕ್ಕಳ ಉಳಿವು ಮಂತ್ರ, ಬೆಳವಣಿಗೆಗಾಗಿ ಪ್ರಸವ ಪೂರ್ವ ಆರೈಕೆ ಹೆರಿಗ ಮಾಡುವ ಸೇವೆಗಳು, ಪ್ರಸವೋತ್ತರ ಆರೈಕೆ, ಸಾಂಕ್ರಾಮಿಕ ಜಾಡ್ಯಗಳ ವಿರುದ್ಧ ಲಸಿಕೆ ನೀಡಂಎಕೆ. ಮೌಖಿಕ ಪುನರ್ಜಲೀಕರಣ ಉಪಚಾರ, ರಕ್ತಹೀನತೆಯನ್ನು ತಡೆಗಟ್ಟುವುದಕ್ಕೆ ಪ್ರತಿಬಂಧಕ ಉಪಚಾರ ಗಳನ್ನು ಮಾಡಲಾಗುತ್ತಿದೆ.

ನಗರ ಪ್ರದೇಶಗಳಿಗೆ ಹಸಿರು ಕಾರ್ಡು.

೬೬೭. ಶ್ರೀ ಜ್ಞಾನದೇವ ದೊಡ್ಡ ಮೇಟಿ. (ರೋಣ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ೨೧,೦೦೦ಕ್ಕೂ ಮಿಗಾರದ ಸಣ್ಣ ನಗರ ಪ್ರದೇಶಗಳಿಗೆ ಪಡಿತರ ಸಲುವಾಗಿ ಹಸಿರು ಕಾರ್ಡು ಕೊಡುವ ವಿಚಾರ ಸರ್ಕಾರದವರ ಗಮನದಲ್ಲಿ ಇದೆಯೇ ?